ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ನನ್ನದೊಂದು ಸಲಹೆ ಏನೆಂದರೆ, ಸರ್ಕಾರದವರಿ ಈ ವಿಷಯದ ಬಗ್ಗೆ ತೆಗೆದುಕೊಳ್ಳತಕ್ಕ ನಿಲುವು ಏನು ಎನ್ನುವುದು ಕೂಡ ನಮಗೆ ಗೊತ್ತಿಲ್ಲ ಮಂತ್ರಿ ಗೋಕಾಕ್‌ರವರ ವರದಿಯನ್ನು ಎಲ್ಲಾ ಸದಸ್ಯರಿಗೂ ಒದಗಿಸಿಕೊಡಬೇಕೆಂದು ಕೇಳಿಕೊಂಡು, ತಮ್ಮ ಅಪ್ಪಣೆ ಪಡೆದು ಈ ಸದನದ ಮುಂದಾಂತರ ಸಾರ್ವಜನಿಕರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ಸದನದಲ್ಲಿ ಈ ವಿಷಯದ ಬಗ್ಗೆ ಚರ್ಚೆಯಾಗಿ ಸರ್ಕಾರ ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳುವವರೆಗೆ ಚಳುವಳಿ ಮಾಡುವುದು ಬೇಡವೆಂದು ಹೇಳುತ್ತೇನೆ. ಇವತ್ತು ಈ ರೀತಿ ಮನವಿ ಮಾಡಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ ಎಂದರೆ ಇದರ ಬಗ್ಗೆ ಜನ ಅನಾವಶ್ಯಕವಾಗಿ ಭಾವನಾತ್ಮಕವಾಗಿ ಚಳುವಳಿ ಮಾಡತಕ್ಕದ್ದು ಸರಿಯಲ್ಲವೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು.—ಈಗ ಲಂಚ್ ಮಾಡುವುದು ಪ್ರಿವೆಂಚೂರ್ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಬೂತುಗಳಲ್ಲಿ ಸಭೆಗಳು ನಡೆಯುತ್ತಿದೆ. ಮೆರವಣಿಗೆಗಳು ನಡೆಯುತ್ತಿದೆ. ಮೈನಾರಿಟಿ ಕಮ್ಯೂನಿಟಿಯವರಲ್ಲಿ ಮಂತ್ರಿ ಅಲ್ಪಸಂಖ್ಯಾತರಲ್ಲಿ ಮನವಿ ಮಾಡಿಕೊಳ್ಳುವುದು ಸೂಕ್ತವಾಗಿದೆ. ಆದುದರಿಂದ ಈ ವಿಷಯದ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವವರೆಗೆ ಶಾಂತ ರೀತಿಯಲ್ಲಿ ಇರಬೇಕೆಂದು ಜನತೆಯಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

MR. SPEAKER.—Not necessary...

SRI K. BHASKAR NAIDU.—Sir, while speaking, Sri Qumarual Islam said that this will create a law and order problem in the State. Sir, I request that the words 'law and order problem' should be expunged from the records.

INTERRUPTIONS

MR. SPEAKER.—It is not a matter of law and order situation...

INTERRUPTIONS

SRI QUMARUL ISLAM.—Sir because of some counter agitation, I suspected that it may creat to law and order problem.

INTERRUPTIONS

MR. SPEAKER.—The Business Advisory Committee will decide as to when this subject should be taken up.

CALLING ATTENTION TO MATTERS OF URGENT PUBLIC IMPORTANCE

Reg : —*The situation arising out of the decision of the Bangalore University withdrawing the results of LL.B. Degree Examination.*

SRI A. LAKSHMISAGAR.—Sir, I would like to call the attention of the Hon'ble Minister for Education to the situation arising out of the decision of the Bangalore University withdrawing the results of LL B. Degree examination.

SRI G.B. SHANKAR RAO (Hon'ble Minister for Education).—Sir, I would like to make the following statement :

On receipt of a letter dated 27-1-1982 addressed by the Principal University College of Law and Dean, Faculty of Law, Bangalore University to the Vice-Chancellor, Bangalore University alleging that he had reason to suspect malpractice in the valuation of III LL.B. examination, held in July 1981, the matter was discussed at the Extraordinary Syndicate meeting held on Wednesday the 3rd February 1982. After detailed discussions the Syndicate approved the eligibility list and presentation list in respect of University examinations held upto May 1981. In respect of the III Year LL.B. examination held in July 1981 the Syndicate resolved to withdraw the names of candidates included in the eligibility and presentation lists and to take further follow up action as under in the interest of maintaining the image of the University and the academic standards :

1 The Board of Examiners should be changed for III LL.B. for arranging of revaluation of the answer books. The Vice-Chancellor will constitute a new Board of Examiners for the purpose.

2 Withdrawing of results of III LL.B. shown in the eligibility list and Presentation List in respect of examination held in July 1981.

3 Deterrent disciplinary action against the concerned should be instituted.

The Vice-Chancellor on behalf of the University assured the Syndicate that he will take immediate remedial steps to ascertain the fairness or otherwise of the earlier valuation before degrees are recommended to be conferred by the various University Bodies. It is learnt that the Vice-Chancellor has already taken necessary steps in this regard.

SRI A. LAKSHMISAGAR.—Sir, there are 9 law colleges which come under the jurisdiction of the Bangalore University. About 2000 students appeared to have taken the final degree examination during the month of July 1981. There was an inordinate delay in the announcement of results-results were announced in the month of December 1981. After one month there appears the letter of the Dean of Faculty of Law addressed to the Vice-Chancellor complaining against malpractices in the valuation of answer papers and other related matters My submission is, this is an unprecedented Act of the Bangalore University and it has made a number of innocent students suffer and their fates are hanging.

Sir, there is absolutely no fault of students. The University has been lethargic and has not been able to take timely action in checking the evils of copying and malpractices in the correction of answer scripts. The Chairman of the Board of Examiner was permitted to set three question papers. I have been a law Professor myself for the last nearly 20 years. I have been the Paper Setter besides being an Examiner. It is unheard of that a Chairman of the Board of Examiner should be permitted to set three question papers, Not only that a particular person was alloted 600 answer scripts for valuation while the normal quota is between 250 to 300 answer scripts. Then, Sir, the Dean of Faculty, how he got a brain-wave, I do not know, threatened to resign. No action has been taken against him. It is not as if the Hon. Minister for Education was not aware of the fact. There have been loud complaints both from the members of the public and also from a decent section of the students against mass copying, threatened action against invigilators, the teaching staff and the staff of the examination. It has not come as a bolt from the blue only yesterday or day before yesterday. Therefore Sir, I demand explanation from the Government and particularly from the Hon. Minister for Education Sri G. B. Shankar Rao for having failed in taking action in this behalf. In the Upper House, the other day, he made a tall claim that law is being enacted to curb the menace of copying. The malady of copying the cancer of copying is not something new. It has assumed serious propogations. The innocent students are subjected to suffer under several difficulties. If the results are not declared in time, they cannot appear for supplementary examinations. The applications for supplementary examinations have already been called for. They have got to file applications before the end of 31st March, 1982 If there is delay in announcing the results, how are you going to help the students in applying for taking supplementary examinations? You do not seem to have taken any steps in this regard.

The next point that I would like to bring to the notice of the Government is about the tampering of marks card which was detected in University. During the year 1981, the matter was referred to COD Nearly, one year has passed and there is no report whatsoever from the COD.

SRI G. B. SHANKAR RAO.—Sir, the hon. Member is referring to some other matters.

SRI A. LAKSHMISAGAR.—I am only interposing this reference as an off shoot of the deep seated malady that is afflicting the very foundation of University education. Sri G. B. Shankar Rao is an

Education Minister for the last over a period of one year. There is no point in coming out with lame excuses merely saying that the Vice Chancellor is taking serious stops and all that. How do they account for the suffering of innocent students ? Therefore, I charge Government and particularly, Sri G.B. Shankar Rao Hon. Minister for Education have failed in their duty. He has allowed the foundation of University education to be eroded, to be destroyed under his very nose. It is better that he resigns and equally some other person who has heart and soul of the interest of the students is taken charge of.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರ).—ಮಾನ್ಯ ಅಧ್ಯಕ್ಷರೇ, ಈಗತಾನೇ ಕಾನೂನು ತಜ್ಞರಾದ ಮಾನ್ಯ ಲಕ್ಷ್ಮೀಸಾಗರ್‌ರವರು ಮಾತನಾಡಿದ್ದಾರೆ. ನಾನಾದರೂ ಒಂದೇ ಒಂದು ವಿಷಯವನ್ನು ಹೇಳ ಬಯಸುವುದೇನೆಂದರೆ. ೮೦೦ ಮಂದಿ ವಿದ್ಯಾರ್ಥಿಗಳೂ ಕಾಪಿ ಮಾಡಿದವರಲ್ಲ, ಆದರೂ ಕೂಡ ಅವರಿಗೆ ಡಿಗ್ರಿ ಕೊಡುತ್ತಿಲ್ಲ. ಅಷ್ಟೂ ಮಂದಿ ಕಾಪಿ ಮಾಡುವುದಕ್ಕೆ ಸಾಧ್ಯವಿಲ್ಲ. ೮೦೦ ಮಂದಿಗೂ ಡಿಗ್ರಿ ಕೊಡಲಿಲ್ಲವೆಂದರೆ ಅವರಿಗೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ತಾವು ಊಹಿಸಬೇಕಾಗುತ್ತದೆ. ತಾ. ೨೭-೧-೮೨ ರಲ್ಲಿ 'ಯೂನಿವರ್ಸಿಟಿ ಕಾಲೇಜ್ ಆಫ್ ಲಾ ನಪ್ಕಿನ್ಸ್ ಪಾಲರು ಏನು ಒಂದು ಪತ್ರ ವನ್ನು ಬರೆದರೋ' ಅವರ ಪತ್ರದ ಆಧಾರದ ಮೇಲೆ ವಿದ್ಯಾರ್ಥಿಗಳು ಕಾಪಿ ಮಾಡಿದ್ದಾರೆಂದು ಡಿಗ್ರಿ ಕೊಡುವುದನ್ನು ನಿಲ್ಲಿಸಿದಿರಿ. ವಿದ್ಯಾರ್ಥಿಗಳು ಕಾಪಿ ಮಾಡಿದ್ದಾರೆಂಬುದಕ್ಕೆ ಏನಾದರೂ ಆಧಾರಗಳು ದೊರೆತಿವೆಯೆ ಎಂದು ಕೇಳಬಯಸುತ್ತೇನೆ. ವಿಶ್ವವಿದ್ಯಾನಿಲಯ ಹುಟ್ಟಿದಾಗಿನಿಂದಲೂ ಒಂದು ರೀತಿಯ ಬಾಲಗ್ರಹಪೀಡಿತವಾಗಿದೆ. ಅದು ಹುಟ್ಟಿದಾಗ ನಾನು ಕೂಡ ಸೆನೆಟ್ ಸದಸ್ಯನಾಗಿದ್ದೆ. ಅದು ಆವತ್ತಿ ನಿಂದ ಇವತ್ತಿನವರೆಗೆ ಅದೇ ರೀತಿ ಇದೆ. ಈಗ ತಾವು ಏನು ಮಾಡಿದ್ದಿರೆಂದರೆ, ಫೆಡರಲ್ ಯೂನಿವರ್ಸಿಟಿ ಮಾಡಬೇಕಾದುದಕ್ಕೆ ಕತ್ತರಿ ಹಾಕಿದ್ದೀರಿ. ಹೀಗೆ ಅದನ್ನು ಒಂದು ಪ್ರತ್ಯೇಕ ವಿಶ್ವವಿದ್ಯಾನಿಲಯವನ್ನು ಮಾಡಿದ ಹಾಗೆ ಮಾಡಿದ್ದೀರಿ.

ಅಧ್ಯಕ್ಷರು.—ಅದು ಬೇರೆ ವಿಷಯವಾಯಿತು. ವಿಷಯಕ್ಕೆ ತಕ್ಕಂತೆ ಮಾತನಾಡಬೇಕು.

ಶ್ರೀ ಪಿ. ರಾಮದೇವ್.—ಎಲ್.ಎಲ್. ಬಿ. ಫಲಿತಾಂಶವನ್ನು ಹಿಂತೆಗೆದುಕೊಂಡಿರತಕ್ಕದ್ದು ಒಂದೇ ಅಲ್ಲ, ಇಂಥ ಹತ್ತಾರು ನೂರಾರು ಘಟನೆಗಳು ವಿಶ್ವವಿದ್ಯಾನಿಲಯಲ್ಲಿ ನಡೆದಿವೆ. ಬೆಂಗಳೂರು ನಗರದಲ್ಲಿ ಏನೇನು ಕಿಡುಗುಗಳಿವೆ ಅವೆಲ್ಲ ಈ ವಿಶ್ವವಿದ್ಯಾನಿಲಯದಲ್ಲಿವೆ. ಜಾತೀಯತೆ, ಭ್ರಷ್ಟಾಚಾರ, ಕಾಪಿ ಯಿಂಗ್ ಇತ್ಯಾದಿ ಎಲ್ಲ ಇದೆ ಪಿ.ಹೆಚ್.ಡಿ. ಮತ್ತು ಮಾಸ್ಟರ್ ಡಿಗ್ರಿಗಳನ್ನು ತೆಗೆದುಕೊಳ್ಳಬೇಕಾದರೆ ಹೆಣ್ಣು ಮಕ್ಕಳು ಯಾವ ರೀತಿ ಮಾಡುತ್ತಾರೆಂಬುದೆಲ್ಲ ಹಿಂದೆ ಪ್ರತಿಕೆಗಳಲ್ಲಿ ಬಂದಿದೆ ಆ ಬಗ್ಗೆ, ಇನ್ನೂ ಸೆನೆಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಸಮಾಜದಲ್ಲಿ ಏನೇನು ಕಾಣುತ್ತೇವೆಯೋ ಅದೆಲ್ಲ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪಿಡುಗಾಗಿ ಪ್ರತಿಬಿಂಬಿಸುವುದನ್ನು ಕಾಣುತ್ತೇವೆ. ಅವನ್ನು ಸರಿಪಡಿಸುವುದಕ್ಕೆ ಇದುವರೆಗೆ ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಜಿ. ಬಿ. ಶಂಕರ ರಾವ್.—ತಾವೇನು ಸಂಸಾರಿಗಳಲ್ಲ. ಸಮಾಜಸೇವಕರಾಗಿ ಮುನ್ನುಗ್ಗಿ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು. ನೀವು ಆ ಕೆಲಸವನ್ನು ಮಾಡಬೇಕಾಗಿತ್ತು.

ಶ್ರೀ ಪಿ. ರಾಮದೇವ್.—ಅದಕ್ಕೆ ಮಾನ್ಯ ಲಕ್ಷೀಸಾಗರ್‌ರವರು ಹೇಳಿದರು, ನೀವು ರಾಜೀನಾಮೆ ಕೊಡಿ ಎಂದು. ನಾನು ನಿಮ್ಮ ಸ್ಥಾನಕ್ಕೆ ಬಂದರೆ ಮಾಡಿಯೇ ಮಾಡುತ್ತೇನೆ. ನಾನು ಅನೇಕ ಮಂದಿ ವಿದ್ಯಾರ್ಥಿಗಳ ಬಾಯಲ್ಲಿ ಕೇಳಿದ್ದೇನೆ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾಪಿ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಆದರೆ ಇತರ ವಿಶ್ವವಿದ್ಯಾನಿಲಯಗಳಲ್ಲಿ ಸಾಮೂಹಿಕವಾಗಿ ಕಾಪಿ ನಡೆಯುತ್ತಿದೆ ಯಲ್ಲ ಅದಕ್ಕೆ ಏನು ಹೇಳುತ್ತೀರಿ? ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಬೋರ್ಡ್ ಮೇಲೆ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯುತ್ತಾರೆ. ಬೋರ್ಡಿನ ಕೊನೆಯಲ್ಲಿ ಮುಂದಿನ ಬೋರ್ಡ್ ನೋಡಿ, ಎಂದು ಬರೆದಿದ್ದರೆ ವಿದ್ಯಾರ್ಥಿಗಳು ಕೂಡ ಹಾಗೇ ಬರೆದಿರಬಹುತ್ತಾರೆ ತಮ್ಮ ಉತ್ತರ ಪತ್ರಿಕೆಗಳಲ್ಲಿ.

ಶ್ರೀ ಜಿ. ಬಿ. ಶಂಕರ ರಾವ್.—ತಾವು ದಯಮಾಡಿ ವಿಷಯದ ಬಗ್ಗೆ ಮಾತನಾಡಿ.

ಶ್ರೀ ಪಿ. ರಾಮದೇವ್.—ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಆಗಿದ್ದು ಆಗಿದೆ, ಎಷ್ಟೋ ಜನ ಕಾಪಿ ಹೊಡೆದು ಪಾಸ್ ಮಾಡಿ ಕೆಲಸಗಳಿಗೆಲ್ಲ ಸೇರಿದ್ದಾರೆ. ವಿಶ್ವ ವಿದ್ಯಾನಿಲಯಗಳಲ್ಲಿ ಡಿಗ್ರಿಗಳನ್ನು ಕೊಂಡುಕೊಳ್ಳಬಹುದೆಂದು ಇರಾನಿನ ಕೌನ್ಸಿಲ್ ಜನರಲ್‌ರವರು ಕೂಡ ಹೇಳಿದ್ದಾರೆ.

ಅಧ್ಯಕ್ಷರು.—ಅಂಥದ್ದೇನಾದರೂ ಇದ್ದರೆ ಕಳುಹಿಸಿಕೊಡಿ. ಆದನ್ನೆಲ್ಲ ಈಗ ಪ್ರಸ್ತಾಪಿಸುವುದು ಬೇಡ ಇವತ್ತು ಇರತಕ್ಕ ಸಮಸ್ಯೆ ೮೦೦ ಮಂದಿ ವಿದ್ಯಾರ್ಥಿಗಳ ಪರಿಸ್ಥಿತಿ ಏನು ಎಂಬ ಬಗ್ಗೆ ಆಲೋಚನೆ ಮಾಡಿ ಅವರಿಗೆ ಏನಾದರೂ ಪರಿಹಾರ ನೀಡುವ ಬಗ್ಗೆ ಸರ್ಕಾರಕ್ಕೆ ಸಲಹೆ ಮಾಡಬಹುದು. ಉಳಿದ ನಿಮ್ಮ ಈ ಮಾತುಗಳನ್ನೆಲ್ಲ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಮಾಡುವಾಗ, ವಿದ್ಯಾ ಇಲಾಖೆಯ ಬೇಡಿಕೆಗಳ ಬಗ್ಗೆ ಚರ್ಚಿಸುವಾಗ ಅಥವಾ ಆಯವ್ಯಯದ ಮೇಲೆ ಮಾತನಾಡುವಾಗ ಮಾತನಾಡಬಹುದು. ಆದ್ದರಿಂದ, ಈಗ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ.

ಶ್ರೀ ಪಿ. ರಾಮದೇವ್.—ನಾನು ಅಷ್ಟಕ್ಕೆ ಸೀಮಿತವಾಗಿ ಮಾತನಾಡುತ್ತೇನೆ. ೮೦೦ ಜನರ ಫಲಿತಾಂಶಗಳನ್ನು ಈಗಾಗಲೇ ಪಾಸಾಗಿದೆ ಎಂದು ಡಿಕ್ಲೇರ್ ಮಾಡಿದ್ದಾರೆ. ಆವರಿಗೆ ಡಿಗ್ರಿ ಕೊಡಬೇಕಷ್ಟೆ. ಈಗ ಯಾರು ಯಾರನ್ನು ಪಾಸ್ ಎಂದು ಡಿಕ್ಲೇರ್ ಮಾಡಿದ್ದಾರೋ ಅವರಿಗೆ ಡಿಗ್ರಿಗಳನ್ನು ಕೊಡಿ. ಮತ್ತೊಂದು ಏನೆಂದರೆ ಈ ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಮಾಡಬೇಕು. ಈಗಿರುವ ಪದ್ಧತಿಯನ್ನು ಬದಲಾಯಿಸಬೇಕು. ಅಮೆರಿಕಾದಲ್ಲಿ ಮತ್ತಿತರ ವೆಸ್ಟರನ್ ಕಂಟ್ರಿಗಳಲ್ಲಿ ಏನು ಮಾಡುತ್ತಾರೋ ಆ ರೀತಿ ಮಾಡಿ. ಈಗ ಕಾಪಿ ಹೊಡೆಯುವ ಪದ್ಧತಿ ಒಪಳ ಬೆಳೆದುಬಿಟ್ಟಿದೆ. Copying has become such a big menace. ಇದರಿಂದ ಇನ್‌ವಿಜಿಲೇಟರ್ಸ್ ಸಿಗುತ್ತಿಲ್ಲ. ಕೆಲವು ಕಡೆಗಳಲ್ಲಂತೂ ಪರೀಕ್ಷೆಗಳಲ್ಲಿ ಚಾಕ್ಪೀಸ್, ಬಾಕಿ ಹಿಡಿದುಕೊಂಡು ಬರುತ್ತಾರೆ. ಆ ಬಗ್ಗೆ ವರದಿಗಳು ಬಂದಿವೆ. ಆದ್ದರಿಂದ ಈ ಪರೀಕ್ಷಾ ಪದ್ಧತಿ ಬಗ್ಗೆ ಯೋಚನೆ ಮಾಡಬೇಕು. ಮತ್ತೆ ಈಗ ಯಾರು ಯಾರನ್ನು ಪಾಸ್ ಎಂದು ಡಿಕ್ಲೇರ್ ಮಾಡಿದ್ದಾರೋ ಅವರಿಗೆ ಡಿಗ್ರಿ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ಡಾ॥ ತಿಮ್ಮೇಗೌಡರು ಮಾತನಾಡಿ.

ಶ್ರೀ ಹೆಚ್. ಗಂಗಾಧರನ್.—ನಾನು ಮಾತನಾಡುತ್ತೇನೆ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಅವರು ಮಾತನಾಡಲಿ.

ಅಧ್ಯಕ್ಷರು.—ನಾನು ತಿಮ್ಮೇಗೌಡರನ್ನು ಏತಕ್ಕೆ ಕರೆದೆ ಎಂದರೆ ಅವರು ಸೆನೆಟ್ ಸದಸ್ಯರಾಗಿದ್ದಾರೆ.

ಶ್ರೀ ಹೆಚ್. ಗಂಗಾಧರನ್.—ಹಾಗಾದರೆ ಮಾತನಾಡಲಿ. ನಂತರ ನಾನು ಮಾತನಾಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಚಾರ ನಾನು ೫ ನೇ ತಾರೀಖು ಸೆನೆಟ್ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ವಿಶ್ವವಿದ್ಯಾನಿಲಯದಲ್ಲಿ ಮಾಲ್‌ಪ್ರಾಕ್ಟೀಸ್ ಎನ್‌ಕ್ವೈರಿ ಕಮಿಟಿ ಇದ್ದು ಕಾಪಿ ಹೊಡೆಯತಕ್ಕದ್ದು, ಪರೀಕ್ಷಕರನ್ನು ಹೆದರಿಸತಕ್ಕದ್ದು ಏನಾದರೂ ಆದರೆ ಆ ಕಮಿಟಿ ಅದರ ಬಗ್ಗೆ ವಿಚಾರಣೆ ನಡೆಸುತ್ತದೆ. ವಿಶ್ವವಿದ್ಯಾನಿಲಯದ ಗಮನಕ್ಕೆ ಮಾಲ್‌ಪ್ರಾಕ್ಟೀಸ್ ಆಗಿದ್ದು ಗಮನಕ್ಕೆ ಬಂದರೆ ಅವರು ಮಾಲ್‌ಪ್ರಾಕ್ಟೀಸ್ ಕಮಿಟಿಗೆ ವಿಷಯವನ್ನು ಕಳುಹಿಸುತ್ತಾರೆ. ಆದರೆ ದುರಾದೃಷ್ಟವಶಾತ್ ಈ ಬಾರಿ ಮೂರನೇ ಎಲ್.ಎಲ್.ಬಿ. ಪರೀಕ್ಷೆಯಲ್ಲಿ ಪೌಲ್ಯಮಾಪನ ಮಾಡಿದಂಥವರು mass copying ಬಗ್ಗೆ ವರದಿ ಮಾಡದಿರುವುದರಿಂದ ಫಲಿತಾಂಶಗಳು ಪ್ರಕಟವಾಗಿವೆ. ನಂತರ ಇದನ್ನು ಪರಿಶೀಲನೆ ಮಾಡಿದಮೇಲೆ ಸಿಂಡಿಕೇಟ್‌ನವರಿಂದ ಇಷ್ಟು ಜನರಿಗೆ ಡಿಗ್ರಿ ಕೊಡಬಾರದು ಎಂಬ ಸಲಹೆ ನಮ್ಮ ಮುಂದೆ ಬಂದಿತ್ತು. ಆದನ್ನು ನಾವು ಒಪ್ಪಿಕೊಂಡಿದ್ದೇವೆ. ೮೦೦ ಜನ ವಿದ್ಯಾರ್ಥಿಗಳಿಗೆ ೧೩ನೇ ತಾರೀಖು ನಡೆಯತಕ್ಕ ಕಾನ್‌ವೊಕೇಷನ್‌ನಲ್ಲಿ ಡಿಗ್ರಿ ಕೊಡದಿದ್ದರೂ ಒಂದು ತಿಂಗಳಲ್ಲಿ ಈ ಬಗ್ಗೆ ಪರಿಶೀಲನೆ ಮಾಡಿ ತೀರ್ಮಾನಮಾಡಿ Transitory statutes ಪ್ರಕಾರ ಉಪಕುಲಪತಿಗಳೇ ಡಿಗ್ರಿ ಕೊಡಬಹುದು. ೧೩ನೇ ತಾರೀಖು ನಡೆಯತಕ್ಕ ಕಾನ್‌ವೊಕೇಷನ್‌ನಲ್ಲಿ ಡಿಗ್ರಿ ಕೊಡದಿದ್ದರೆ ಏನೂ ತೊಂದರೆಯಾಗುವುದಿಲ್ಲ. ಮಾನ್ಯ ರಾಮದೇವ್ ಅವರು ಹೇಳಿದಹಾಗೆ ೧೩ನೇ ತಾರೀಖು ಡಿಗ್ರಿ ಕೊಟ್ಟುಬಿಟ್ಟು ನಂತರ ವಾಪಸ್ ತೆಗೆದುಕೊಳ್ಳತಕ್ಕ ಸಂದರ್ಭ ಬಂದರೆ ಅದು ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತದೆ.

ಅಧ್ಯಕ್ಷರು.—ಮಾರ್ಚ್ ೩೧ ಪರೀಕ್ಷೆಗೆ ಆರ್ಜಿ ಸಲ್ಲಿಸಲು ಕೊನೆಯ ದಿನಾಂಕವಿದೆ. ಮತ್ತೆ ಇದು ಮುಂದೆ ಹೋದರೆ ಪರೀಕ್ಷೆ ಮೇ ಜೂನ್‌ನಲ್ಲಿ ನಡೆದು ರಿಸಲ್ಟ್ ಜುಲೈಗೆ ಬರುವ ಸಂಭವವಿದೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾಲ್‌ಪ್ರಾಕ್ಟೀಸ್ ಕಮಿಟಿಗೆ ರೆಫರ್ ಮಾಡಿ ಮಾರ್ಚ್ ೧೫ ರೊಳಗೆ ಅವರು ರಿಪೋರ್ಟ್ ಕೊಟ್ಟರೆ ಪಾಸ್ ಆಗಿರುವವರಿಗೆ ಡಿಗ್ರಿ ಕೊಡಬಹುದು. ಫೇಲ್ ಆಗಿರುವವರು ಮತ್ತೆ ಆರ್ಜಿ ಸಲ್ಲಿಸಬಹುದು ಈ ಮಾಲ್‌ಪ್ರಾಕ್ಟೀಸ್ ಬಗ್ಗೆ ಹೇಳಬೇಕಾದರೆ ಇದರಲ್ಲಿ ನಾನಾ ತರಹ ನಡೆಯುತ್ತದೆ. ಉತ್ತರ ಪ್ರದೇಶದಲ್ಲಿ ಒಬ್ಬರು ಇಂಜಿನಿಯರಿಂಗ್ ಕಾಲೇಜ್ ಪ್ರೊಫೆಸರ್ ರವರ ಮಗ ಮಾಲ್‌ಪ್ರಾಕ್‌ಟೀಸ್ ಮಾಡುತ್ತಿದ್ದಾಗ ಸಿಕ್ಕಿಹಾಕಿಕೊಂಡು ಹಿಡಿಯುವುದಕ್ಕೆ ಹೋಗಿದಾಗ ಸ್ಕ್ರಿಪ್ಟನ್ನೇ ನುಂಗಿಹಾಕಿಬಿಟ್ಟ ಎಂದು ರಿಪೋರ್ಟ್ ಬಂತು. ಆಮೇಲೆ ಅವನು ನುಂಗೇ ಇಲ್ಲ ಎಂದು ಹೇಳಿದ. ನೀವು ಸ್ಕ್ರಿಪ್ಟ್ ನುಂಗಿದಿರಲ್ಲಾ ಅವರ ರುಚಿ ಹೇಗಿತ್ತು ಎಂದು ಕೇಳಿದ್ದಕ್ಕೆ ಅವನು ನೋ ಟೇಸ್ಟ್ ಎಂದು ಹೇಳಿದ. ಹೀಗೆ ಮಾಲ್‌ಪ್ರಾಕ್ಟೀಸ್ ಆಗುತ್ತದೆ. ಇವತ್ತು ೧೩ನೇ ತಾರೀಖು ನಡೆಯ ತಕ್ಕ ಕಾನ್‌ವೊಕೇಷನ್‌ನಲ್ಲಿ ಎಲ್.ಎಲ್.ಬಿ. ಹುಡುಗರಿಗೆ ಡಿಗ್ರಿ ಕೊಡಕೂಡದೆಂದು ಏನು ನಿರ್ಧಾರ ತೆಗೆದುಕೊಂಡಿದ್ದಾರೋ ಅದು ಸಾಧುವಾದುದು. ೩೧ನೇ ತಾರೀಖು ಆರ್ಜಿ ಸಲ್ಲಿಸಲು ಅವಕಾಶವಿದ್ದು ಅಷ್ಟರೊಳಗೇ ತೀರ್ಮಾನ ಮಾಡಬಹುದಂ. ಈ ಬಗ್ಗೆ ಕೂಡಲೇ ವಿಚಾರಣೆ ನಡೆಸಿ ವರದಿ ತರಿಸಿಕೊಂಡು ನಿಜವಾಗಿ ಪಾಸ್ ಆಗಿರುವವರಿಗೆ ಡಿಗ್ರಿ ಕೊಡತಕ್ಕದ್ದು. ಫೈಲ್ ಆಗಿರುವವರಿಗೆ ಮುಂದಿನ ಪರೀಕ್ಷೆಗೆ ಕಟ್ಟುವುದಕ್ಕೆ ವ್ಯವಸ್ಥೆ ಮಾಡತಕ್ಕದ್ದು ಮಾಡಬಹುದು. ನಾನೂ ಸೆನೆಟ್ ಸದಸ್ಯನಾಗಿರುವುದರಿಂದ ಭರವಸೆ ಕೊಡುತ್ತೇನೆ. ಯಾರಿಗೂ ಅನ್ಯಾಯ ಆಗದಂತೆ ವ್ಯವಸ್ಥೆ ಮಾಡುತ್ತೇವೆ. ಯಾರಿಗೂ ಡಿಗ್ರಿ ಕೊಡಬಾರದು, ಎಲ್ಲರಿಗೂ ಅನ್ಯಾಯ ಮಾಡಬೇಕು ಎಂಬುದು ನಮ್ಮ ಉದ್ದೇಶವಲ್ಲ. ಅನುಮಾನ ಬಂದಿರುವುದರಿಂದ ಪರಿಶೀಲನೆ ಮಾಡಿ ಅನುಮಾನ ಪರಿಹಾರ ಆದಮೇಲೆ ಯಾರು ನಿಜವಾಗಿ ಪಾಸಾಗಿರುತ್ತಾರೋ ಅವರಿಗೆ ಡಿಗ್ರಿ ಕೊಡಬಹುದು. ಆದ್ದರಿಂದ ಈ ಬಗ್ಗೆ ಯಾರೂ ಶಂಕೆ ಪಡಬೇಕಾದ ಅಗತ್ಯವಿಲ್ಲ.

ಶ್ರೀ ಹೆಚ್. ಗಂಗಾಧರನ್.—ಪ್ರಿನ್ಸಿಪಾಲರು ಪತ್ರ ಬರೆದಿದ್ದಾರೆ. ಅದರಲ್ಲಿ he had reasons to suspect mal-practice. What are the reasons ? ಅದರ ಬಗ್ಗೆ ಹೇಳಬೇಕು. ಮಾನ್ಯ ತಿಮ್ಮೇಗೌಡರು ಯಾರಿಗೂ ತೊಂದರೆಯಾಗುವುದಿಲ್ಲ ಎಂದು ಹೇಳುತ್ತಿದ್ದರು. ಸಿಂಡಿಕೇಟ್ ಡಿಸಿಷನ್ ಪ್ರಕಾರ ಏರಡನೇ ತೀರ್ಮಾನ ಏನಿದೆ ಆ ಬಗ್ಗೆ ಸ್ವಲ್ಪ ನೋಡಬೇಕಾಗಿದೆ. ಅದರಲ್ಲಿ ಈ ರೀತಿ ಹೇಳಿದ್ದಾರೆ. "Withdrawing of results of III L.L.B. show in the eligibility list and Presentation List in respect of examination held in July 1981." ಮಾಲ್‌ಪ್ರಾಕ್ಟೀಸ್ ಆಗಿದೆ ಎಂದು ಸಸ್ಪೆಕ್ಟ್ ಮಾಡಿದರೆ suspicion is not proved under law. Merely on the basis of suspicion you want to punish people without its being proved. Will it be valid under law ? That will have to be clarified. ಮಾಲ್‌ಪ್ರಾಕ್ಟೀಸ್ ಎಂದರೆ What are the mal-practice that made the Syndicate to come to that conclusion ? What is the proof ? ಮಾಲ್‌ಪ್ರಾಕ್ಟೀಸ್ ಎಂದರೆ ಸಿಂಡಿಕೇಟ್ ಅಭಿಪ್ರಾಯದ ಪ್ರಕಾರ Mass copying ಎಂದು ಹೇಳಿದರು. ವಿದ್ಯಾರ್ಥಿಗಳು ತಪ್ಪು ಮಾಡಿದ್ದಾರೆ, ಕ್ರಮ ತೆಗೆದುಕೊಂಡಿದ್ದೀರಿ. ಇನ್‌ವಿಜಿಲೇಟರ್ಸ್ ಯಾರಿದ್ದರು ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? Whether they are still continuing as teachers in that Institution ? ಈಗ ಎಲ್.ಎಲ್.ಬಿ. ಪರೀಕ್ಷೆಯ ಪೂರ್ಣ ಫಲಿತಾಂಶವನ್ನು ಹಿಂತೆಗೆದುಕೊಂಡಿದ್ದೀರಿ. ಹಾಗಾದರೆ ಪರೀಕ್ಷೆಗೆ ಕುಳಿತಿದ್ದ ಎಲ್ಲ ವಿದ್ಯಾರ್ಥಿಗಳೂ ಮಾಲ್‌ಪ್ರಾಕ್ಟೀಸ್ ಮಾಡಿದ್ದಾರೆಂದು ತೀರ್ಮಾನವಾಗಿದೆಯೆ ? ಸತ್ಯವಾಗಿ ಅಭ್ಯಾಸ ಮಾಡಿ ಕಾಪಿ ಮಾಡದೇ ಕಾನೂನುಬದ್ಧವಾಗಿ ಬರೆದಂಥ ಅಭ್ಯರ್ಥಿಗಳಿಗೆ ಇದು ಶಿಕ್ಷೆ ಆಗುವುದಿಲ್ಲವೇ ? ನಿರಪರಾಧಿಗೆ ಶಿಕ್ಷೆ ಕೊಡುವುದು ಸಿಂಡಿಕೇಟಿನ ಧರ್ಮವೇ ? ಈ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್ ಅವರು ಎತ್ತಿದ ಪ್ರಶ್ನೆಗೆ ಡಾ॥ ತಿಮ್ಮೇಗೌಡರೇ ಅರ್ಧ ಉತ್ತರ ಕೊಟ್ಟಿದ್ದಾರೆ. ಇದು ಶೈಕ್ಷಣಿಕ ಆಡಳಿತಕ್ಕೆ ಸಂಬಂಧಿಸಿದ ವಿಚಾರ. ಮಾನ್ಯ ಗಂಗಾಧರನ್ ಅವರು ಪತ್ರದಲ್ಲಿ ಅಡಕವಾಗಿರುವ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಅದರ ಬಗ್ಗೆ ವಿವರಣೆ ಕೊಡುವುದಕ್ಕೆ ಸಾಧ್ಯವಿಲ್ಲ. ನಾನೂ ಕೊಡಲೂಬಾರದು. ನಮ್ಮ ಹಿಡಿತ ಎಷ್ಟರಮಟ್ಟಿಗಿದೆಯೋ ಅಷ್ಟರಮಟ್ಟಿಗೆ ನಾವು ನೋಡಬೇಕು. ವಿಶ್ವವಿದ್ಯಾನಿಲಯದ ಪ್ರತಿಯೊಂದು ವ್ಯವಹಾರದ ಪ್ರತಿ ಹಂತದಲ್ಲೂ ನಾವು ಕೈಹಾಕುವುದು ಸರಿಯಲ್ಲ. ಪ್ರಶ್ನೆಪತ್ರಿಕೆ ತಪಾಸಣೆ ಮಾಡುವಾಗ ಫಲಿತಾಂಶ ಪ್ರಕಟಣೆ ಮಾಡುವಾಗ ಪ್ರತಿಯೊಂದು ಹಂತದಲ್ಲೂ ಸರ್ಕಾರದವರು ಪ್ರವೇಶ ಮಾಡಿ ವಿಶ್ವವಿದ್ಯಾನಿಲಯದ ಆಡಳಿತವನ್ನು ಹಾಳು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ವಿಶ್ವವಿದ್ಯಾನಿಲಯದ ಗೌರವ ಏನು ಉಳಿಯುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ಮಾನ್ಯ ಲಕ್ಷ್ಮೀಸಾಗರ್ ಅವರು ಸೆನೆಟ್ ಸದಸ್ಯರಲ್ಲದಿದ್ದರೂ ಉತ್ತಮ ಕಾನೂನು ಪ್ರಾಧ್ಯಾಪಕರು.

೩-೦೦ ಪಿ.ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಇನ್ನೇನು ಉಳಿದಿದೆ ?

ಶ್ರೀ ಜಿ. ಬಿ. ಶಂಕರರಾವ್.—ನಾನು ಹೇಳುತ್ತಿರುವುದು...

ಶ್ರೀ ಎ. ಲಕ್ಷ್ಮೀಸಾಗರ್.—ಬೆಲಿಯೇ ಎದ್ದು ಹೊಲ ಮೇಯ್ದಂಗಾಗಿದೆ.

ಶ್ರೀ ಜಿ. ಬಿ. ಶಂಕರ್‌ರಾವ್.—ಸೂಳೆ ಪಾಪ ಸನ್ಯಾಸಿ ಮೇಲೆ ಯಾಕೆ ಕಟ್ಟುತ್ತೀರಿ ?

ಶ್ರೀ ಜಿ. ಕೆ. ತಕ್ಕೇಡ್.—ಇಲ್ಲಿ ಸನ್ಯಾಸಿ ಯಾರು ?

ಅಧ್ಯಕ್ಷರು.—ಸಾಕು, ಸಾಕು.

ಶ್ರೀ ಜಿ. ಬಿ. ಶಂಕರ್‌ರಾವ್.—ಮಾನ್ಯ ಲಕ್ಷ್ಮೀಸಾಗರ್ ಹಾಗೂ ಮಾನ್ಯ ರಾಮದೇವ್ ಅವರಿಗೆ ವಿದ್ಯಾರ್ಥಿಗಳ ಅಂಕಿಸಂಖ್ಯೆ ಬಗ್ಗೆ ಮಾಹಿತಿ ಇಲ್ಲ ಎಂದು ಕಾಣುತ್ತದೆ. ೩ನೇ ವರ್ಷದ ಕಾನೂನು ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳ ಸಂಖ್ಯೆ ೯೬೭ ಮಾತ್ರ. ಇದರಲ್ಲಿ ಹಿಂದೆ ಫೇಲ್ ಆದ ರಿಪೀಟರ್ಸ್ ಸಹಾ ಇದ್ದರು. ರಿಪೀಟರ್ಸ್‌ಗಳನ್ನು ಒಳಗೊಂಡಂತೆ ಈ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಸಂಖ್ಯೆ ೨೩೫. ಇದರಲ್ಲಿ ೮೦೦ ಎಂದು ಹೇಳುವುದು ನ್ಯಾಯವಾದುದಲ್ಲ. ಮಾಸ್ ಕಾಪಿ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಈ ಕಾಪಿ ಹೊಡೆಯುವುದು ೩-೪-೮ ವರ್ಷಗಳಿಂದ ಇದ್ದುದು ನಾನು ಅಧಿಕಾರಕ್ಕೆ ಬಂದ ಮೇಲೆ ಹತೋಟಿಗೆ ಬಂದಿದೆ. ಇದಕ್ಕೆ He must thank me for that. ಇದನ್ನು ಸರ್ಕಾರವೇ ಮಾಡಬೇಕೆಂದಲ್ಲ. ಕಾಪಿ ಹೊಡೆಯುವುದಕ್ಕೂ ಸರ್ಕಾರಕ್ಕೂ ಸಂಬಂಧವಿಲ್ಲ.

ಶ್ರೀ ಪಿ. ರಾಮದೇವ್.—ತಾವು ಅಧಿಕಾರಕ್ಕೆ ಬಂದಮೇಲೆ ಮಾಸ್ ಕಾಪಿ ಜಾಸ್ತಿ ಆಗಿದೆ. ಇದು ಇಡೀ ಕರ್ನಾಟಕಕ್ಕೆ ಅವರಿಸಿಕೊಂಡಿದೆ.

ಶ್ರೀ ಜಿ. ಬಿ. ಶಂಕರರಾವ್.—ಕಾಪಿ ಹೊಡೆಯುವುದಕ್ಕೆ ನಾವು ಪ್ರೋತ್ಸಾಹ ಕೊಟ್ಟಿಲ್ಲ. ನಾನು ಶಿಕ್ಷಕನಾಗಿದ್ದವನು. ನಾನು ಈ ಕೆಲಸ ಮಾಡುವುದಕ್ಕೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ತಮ್ಮವರ ಮುಖಾಂತರ ಅವರಿಗೆ ಧೈರ್ಯ ಬಂದು ಅವರು ಆ ಕೆಲಸ ಮಾಡಿರಬಹುದು. ತಾವುಗಳು, ತಮ್ಮಂತ ನಾಯಕರು ಮುಖಂಡರು ಧೈರ್ಯ ಕೊಟ್ಟಿರುವುದರಿಂದ ಅವರು ಅದನ್ನು ಮಾಡಿರಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಯಾರು ? ನಮ್ಮಂತಹ ಮುಖಂಡರು ಪ್ರೋತ್ಸಾಹ ಕೊಟ್ಟಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದರು.

ಶ್ರೀ ಜಿ. ಬಿ. ಶಂಕರರಾವ್.—ತಮ್ಮಂತಹವರು ಎಂದು ಹೇಳಿದ್ದು.

MR. SPEAKER.—Don't upset him.

SRI A. LAKSHMISAGAR.—Sir, I take strong exception to this. Sir, the Hon'ble Minister must make the statement with a sense of responsibility.

ಅಧ್ಯಕ್ಷರು.—ನೀವು ಮಂತ್ರಿಗಳಾಗಿ ಬಂದಮೇಲೆ ಕಾಪಿ ಹೊಡೆಯುವುದು ಜಾಸ್ತಿ ಆಯಿತು ಎಂದ ಮಾನ್ಯ ಸದಸ್ಯರು ಹೇಳಿದರು. ಸಮಾಜ ಪ್ರೋತ್ಸಾಹ ಕೊಟ್ಟರೆ...

ಶ್ರೀ ಎ. ಲಕ್ಷ್ಮೀಸಾಗರ್.—ಅಧಿಕಾರ ಇದೆ. ಏಕೆ ಅದನ್ನು ಉಪಯೋಗಿಸಿಕೊಂಡಿಲ್ಲ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಜಿ. ಬಿ. ಶಂಕರರಾವ್.—ಕುಂಬಳಕಾಯಿ ಕಳ್ಳ ಎಂದರೆ...

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಕುಂಬಳಕಾಯಿ ಇಲ್ಲ, ಬರೀ ಕಳ್ಳ ಇದ್ದಾನೆ ಇಲ್ಲಿ ವೇದಾಂತ ಹೇಳುವುದಕ್ಕಿ ಹೋಗುವುದಂ ಬೇಡ. Degrees are being sold, marks lists are being sold. What action the Hon'ble Minister has taken ? How many professors have been kept under suspension ? How many examinerships have not been renewed ? is the Hon. Minister able to give figures ? His only explanation is that it is an academic matter, he need not get into it, and he does not answer this quetsion. Government should take action.

ಶ್ರೀ ಜಿ. ಬಿ. ಶಂಕರರಾವ್.—ಅವರು ಹೀಗೆ ಭಾಷಣ ಮಾಡಿದರೆ ಹೇಗೆ ? ಮಾನ್ಯ ಸದಸ್ಯರಂ ಕಾನೂನು ಪಂಡಿತರಿದ್ದಾರೆ.

ಅಧ್ಯಕ್ಷರು.—ನೀವಿಬ್ಬರೂ ಎಂ.ಎ., ಓದಿದ್ದೀರಿ. ಹಾಗೂ ಒಬ್ಬರು ಬಿ.ಎಲ್., ಹಾಗೂ ಇನ್ನೊಬ್ಬರು ಎಲ್.ಎಲ್.ಬಿ. ವ್ಯಾಸಂಗ ಮಾಡಿದ್ದೀರಿ.

ಶ್ರೀ ಜಿ. ಬಿ. ಶಂಕರರಾವ್.—ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡತಕ್ಕವರು ಉಪನ್ಯಾಸಕರು, ಪ್ರೊಫೇಸರ್ಸ್, ರೀಡರ್ಸ್ ಇದ್ದಾರೆ. ಇವರೆಲ್ಲರನ್ನೂ ನೋಡಿಕೊಳ್ಳುವುದು ನನ್ನ ಕೆಲಸ ಅಲ್ಲ. ಅಲ್ಲಿ ಚಾನ್ಸಲರ್ ಇದ್ದಾರೆ, ವೈಸ್ ಚಾನ್ಸಲರ್ಸ್ ಇದ್ದಾರೆ. ಇದನ್ನೆಲ್ಲಾ ತಿಳಿದುಕೊಂಡು ನನ್ನ ಮೇಲೆ ಆರೋಪ ಮಾಡಿದರೆ ಹೇಗೆ ?

ಅಧ್ಯಕ್ಷರು.—ಈ ಬಗ್ಗೆ ಸರ್ಕಾರ ಹೆಲ್ಪ್‌ಲೆಸ್ ಎಂದು ಹೇಳುವುದು ಬೇಡ, ಸಂಬಂಧಪಟ್ಟವರಿಗೆ ಡೈರೆಕ್ಷನ್ ಕೊಡಿ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಜಿ.ಬಿ. ಶಂಕರರಾವ್.—ವಿಶ್ವವಿದ್ಯಾನಿಲಯ ಒಂದು ಸ್ವಾಯತ್ತ ಸಂಸ್ಥೆ ಇದೆ. ಕುಲಪತಿಗಳಿಗೆ ತಿಳಿಸಿ ಸರಿಪಡಿಸಬೇಕಾಗುತ್ತದೆ. ಇದನ್ನು ನಾನೇ ಮಾಡಬೇಕೆಂದರೆ ಹೇಗೆ ? ಇದು ಸ್ವಾಯತ್ತ ಸಂಸ್ಥೆ ಇದೆ. ನಮ್ಮ ಮಟ್ಟದಲ್ಲಿ ನಾವು ಏನು ಮಾಡಬೇಕು ಅದನ್ನು ಮಾಡುತ್ತಿದ್ದೇವೆ. ಇವರು ತಿಳಿದುಕೊಂಡ ಹಾಗೆ ನಮ್ಮ ತಪ್ಪಿನಿಂದಲೇ ನಮ್ಮ ಅದಕ್ಷತೆಯಿಂದಲೇ ಆಗಿದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಕಾಲಕಾಲಕ್ಕೆ ಏನೇನು ನಮ್ಮ ಲಕ್ಷ್ಯಕ್ಕೆ ಬರುತ್ತದೆ ಆ ಬಗ್ಗೆ ಅಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈ ಬಗ್ಗೆ ಕರಡು ಕಾನೂನು ರಚಿತವಾಗಿದೆ. ಅದನ್ನು ಸದನದಲ್ಲಿ ಇಟ್ಟು ಬೇಕಾದರೆ ೨-೩ ದಿವಸಗಳಲ್ಲಿ ಪಾಸ್ ಮಾಡೋಣ.

SRI A. LAKSHMISAGAR.—Sir, why an ordinance was not issued? hy a B ill should not be introduced?

MR. SPEAKER.—Please don't disturb him.

SRI G.B. SHANKAR RAO.—Sir, we have to elicit public opinion. At least one weeks time should be there. We are adjourning after a ouple of days.

ಶ್ರೀ ಎ. ಲಕ್ಷ್ಮೀಸಾಗರ್.—ಬಿಲ್ ತಂದಾಗ ಪಬ್ಲಿಕ್ ಒಪೀನಿಯನ್ ಬೇಕೆಂದು ಕಾನೂನಿದೆಯೇ?

MR. SPEAKER.—Gazette publication is to get public opinion.

SRI G.B. SHANKAR RAO.—The intention of publishing a Bill in the Gazette is to elicit public opinion. If he doesnot know, at least he should learn now. As a lawer he must have known this.

SRI A. LAKSHMISAGAR.—Sir, there is nothing to learn from the Hon'ble Minister. Now I have to unlearn from him.

ಅಧ್ಯಕ್ಷರು.—ವಿಷಯಕ್ಕೆ ಸಂಬಂಧಪಟ್ಟಿದ್ದನ್ನು ಪ್ರಸ್ತಾಪ ಮಾಡಿ. ಏಕೆ ಉದ್ವೇಗ ಪೂರ್ವಕವಾಗಿ ಮಾನ್ಯ ಮಂತ್ರಿಗಳಿಗೆ ಕೋಪ ಬರುಪಹಾಗೆ ಮಾಡುತ್ತೀರಿ?

ಶ್ರೀ ಅಜೀಜ್ ಸೇಟ್.—ಜಿ.ಬಿ. ಶಂಕರರಾವ್ ಎಂದರೆ, ಗಡಬಡೆ ಶಂಕರರಾವ್ ಎಂದು.

ಶ್ರೀ ಜಿ.ಬಿ. ಶಂಕರರಾವ್.—ಈ ವಿಷಯ ಈಗ ಬೇಡ. ಶ್ರೀ ರಾಮದೇವ್ ಅವರು ಕೆಲವು ಇನ್ನೊಸೆಂಟ್ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರೆಂದು ಹೇಳಿದರು. ಈ ಪ್ರಶ್ನೆ ಸಿಂಡಿಕೇಟ್, ಸೆನೇಟ್ ಮುಂದೆ ಬರುತ್ತದೆ. ಬರೀ ಕಾಪಿ ಹೊಡೆದುದರಿಂದ ಇದು ಆಗಿದೆ ಎನ್ನುವ ಪ್ರಶ್ನೆ ಅಲ್ಲ. ಉತರ ಪತ್ರಿಕೆಗಳನ್ನು ತಪಾಸಣೆ ಮಾಡುವಾಗ ಬ್ರಷ್ಟಾಚಾರವಾಗಿದ್ದು, ಯಾವ ಯಾವ ಪೇಪರ್‌ನಲ್ಲಿ ಏನೇನು ಆಗಿದೆ ಎನ್ನುವುದರ ಬಗ್ಗೆ ಪುನಃ ವ್ಯಾಲ್ಯುಯೇಷನ್ ಮಾಡಬೇಕಾಗುತ್ತದೆ. ಈ ಬಗ್ಗೆ ಸಿಂಡಿಕೇಟ್, ಅಕಡಮಿಕ್ ಕೌನ್ಸಿಲ್, ಸೆನೇಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುತ್ತವೆ. ತೀವ್ರವಾಗಿ ಈ ವಿಷಯದಲ್ಲಿ ತಪಾಸಣೆ ಕೆಲಸ ಪೂರೈಸಿ ಫಲಿತಾಂಶವನ್ನು ಬೇಗನೆ ಪ್ರಕಟಣೆ ಮಾಡಿ ಎಂದು ನಾವು ಸಲಹೆ ಕೊಡಬೇಕು, ಅದನ್ನು ಕೊಡುತ್ತೇವೆ. ಮಾನ್ಯ ಗಂಗಾಧರನ್ ಅವರು ಆ ಪತ್ರಿಕೆಯಲ್ಲಿ ಏನಿದೆ, ಏನು ಕಾರಣ ಎಂದೆಲ್ಲಾ ಕೇಳಿದರು. ಅಷ್ಟು ಒಳಹೊಕ್ಕು ನಾವು ಅದನ್ನೆಲ್ಲಾ ಸ್ವಯತ್ತ ಸಂಸ್ಥೆಯಲ್ಲಿ ಕೇಳುವುದು ತಪ್ಪಾದೀತು. ಅವರಲ್ಲಿ ನಮಗೆ ನಂಬಿಕೆ ಇದೆ. ಅವರು ಮಾಡತಕ್ಕ ಕೆಲಸದಲ್ಲಿ ಸರ್ಕಾರ ಪ್ರವೇಶ ಮಾಡಿ, ತಪಾಸಣೆ ಮಾಡುವುದು ತಪ್ಪಾಗುತ್ತದೆ. ಅವರ ಮೇಲೆ ನಂಬಿಕೆ ಇಡಬೇಕು. ಯಾವ ಯಾವ ಪತ್ರಿಕೆಯಲ್ಲಿ ಏನೇನು ಬ್ರಷ್ಟಾಚಾರ ನಡೆದಿದೆ ಎಂದು ತಿಳಿಯಲು ಬೋರ್ಡ್ ಆಫ್ ಎಕ್ಸಾಮಿನರ್ಸ್‌ನ್ನು ರೀಕಾನ್ಸ್ಟ್ರಟ್ಯೂಟ್ ಮಾಡಲಾಗಿದೆ. ಈ ಬಗ್ಗೆ ತಪಾಸಣೆ ನಡೆದು ಪರಿಣಾಮ ಏನು ಎಂಬುದನ್ನು ಇನ್ನು ಸ್ವಲ್ಪ ದಿವಸಗಳಲ್ಲಿ ಹೊರಗಿಡುತ್ತಾರೆಂದು ನಾನು ಹೇಳುತ್ತೇನೆ. ಮಾನ್ಯ ತಿಮ್ಮೇಗೌಡರೂ ಸಹಾ ಈ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ಆದಷ್ಟು ಶೀಘ್ರವಾಗಿ ಫಲಿತಾಂಶ ಬರುವ ಹಾಗೆ ನಾವು ಸಲಹೆಯನ್ನು ನಮ್ಮ ವಿಶ್ವವಿದ್ಯಾನಿಲಯಕ್ಕೆ ಕೊಡುತ್ತಿದ್ದೇವೆ.

SRI A. LAKSHMISAGAR.—Sri, within what period..... .....

ಅಧ್ಯಕ್ಷರು.—ಮಾನ್ಯ ತಿಮ್ಮೇಗೌಡರು ಹೇಳಿದ್ದು ತಾವು ಗಮನಿಸಲಿಲ್ಲವೆಂದು ಕಾಣುತ್ತೆ. ಮಾರ್ಚಿ ೩೧ ರೊಳಗೆ ಪರಿಶೀಲನೆ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದಾರೆ. ಅವರು ಕೂಡ ಒಬ್ಬರು ಸದಸ್ಯರು.

SRI A. LAKSHMISAGAR.—Sir, the Hon. Minister must say. I want a statement from the Hon. Minister. I would like to know within what time the enquiry is going to be finalised and the results are made known to the students. Secondly, there is a good deal of agitation and tension in the minds of the students. You must do something to alleviate their grievances. Are you going to postpone the Supplementary examinations to enable the students who may be failing as a result of the revaluation of these papers?

ಶ್ರೀ ಜಿ.ಬಿ. ಶಂಕರ್‌ರಾವ್.—ಈಗಾಗಲೇ ತಿಮ್ಮೇಗೌಡರು ಹೇಳಿದ್ದಾರೆ. ಅಷ್ಟು ಅವಧಿಯಲ್ಲಿ ಉತ್ತರ ಪತ್ರಿಕೆಗಳನ್ನು ತಪಾಸಣೆ ಮಾಡಿಸಿ, ಈ ತಿಂಗಳ ಕೊನೆಯಲ್ಲಿ ಅಥವಾ ಮಾರ್ಚಿ ೩೧ರೊಳಗೆ ತೀರ್ಮಾನ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಿಂತ ಮೊದಲೇ ಅಂದರೆ ಹತ್ತಿರದಲ್ಲಿ ಮಾಡುತ್ತೇವೆ ನ್ನುವ ಭರವಸೆಯನ್ನು ಕೊಡುತ್ತೇನೆ. ಇನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕ್ಷೋಭೆ ಉಂಟಾಗಿದ್ದರೆ ಅದನ್ನು ಅವರು ಶಮನ ಮಾಡಿಕೊಳ್ಳಬೇಕು. ಇಲ್ಲಿ ಸಪ್ಲಿಮೆಂಟರಿ ಪರೀಕ್ಷೆಯನ್ನು ಮುಂದಕ್ಕೆ ಹಾಕು ವಂತ ಪ್ರಶ್ನೆ ಉದ್ಭವಿಸುವುದಿಲ್ಲ.